# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 991 |
| ಉತ್ತರಿಸಬೇಕಾದ ದಿನಾಂಕ | 27-12-2022. |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಗೋರನಳ್ಳಿ ಗ್ರಾಮದ ಸರ್ವೆ ನಂ 21/1 ಮತ್ತು 22/2 ರಲ್ಲಿ ವಸತಿ ಯೋಜನೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ವಸತಿ ಯೋಜನೆಯಲ್ಲಿ ವಸತಿ ಹಂಚಿಕೆ (ಮಾರಾಟ) ಮಾಡುವಾಗ ಮೂಲಸೌಲಭ್ಯಗಳು ಪೂರ್ಣಗೊಳ್ಳದೆ ನಿವೇಶನ ಹಂಚಲು ಅವಕಾಶವಿದೆಯೇ: | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳುತ್ತಿರುವ ಗೋರನಹಳ್ಳಿ (ಬಿ) ಗ್ರಾಮದ ಸರ್ವೆ ನಂ.21/1 ಮತ್ತು 22/2 ರಲ್ಲಿ ವಸತಿ ಯೋಜನೆ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಸತಿ ಯೋಜನೆಗಳಲ್ಲಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗಳಿಗೆ ಶೇ:50 ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಉಂಟಾದ ಲಾಕಡೌನ್‌ಯಿಂದಾಗಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ವಿಳಂಬವಾಗಿರುತ್ತದೆ. ಹಾಗೂ ಸದರಿ ಜಮೀನಿನ ಮಾಲೀಕರು ಪ್ರಾಧಿಕಾರಕ್ಕೆ ತಮ್ಮ ಭಾಗದ ಶೇ:50 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ಕೋರಿರುವುದರಿಂದ ಹಾಗೂ ಇಲಾಖೆಗಳಿಗೆ ಬಾಕಿ ಉಳಿದ ಅನುದಾನವನ್ನು ಬಿಡುಗಡೆ ಮಾಡುವ ಸಂಬಂಧ ವಸತಿ ಯೋಜನೆಯಲ್ಲಿನ ಪ್ರಾಧಿಕಾರದ ಪಾಲಿನ ಶೇ:50 ರಷ್ಟು ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ |

| | | |
|---|---|---|
| | | (ನಿವೇಶನಗಳ ಹಂಚಿಕೆ) ನಿಯಮಗಳು 1991 ರಂತೆ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ದಿನಾಂಕ:19/04/2022 ರಂದು ಜರುಗಿದ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯಿಸಿದಂತೆ ನಿವೇಶನಗಳನ್ನು ಲಾಟರಿಯನ್ನು ದಿನಾಂಕ 05/05/2022 ರಂದು ಆನ್‌ಲೈನ್ (ಯೂಟೂಬ್ ಲೈವ್) ಮುಖಾಂತರ ಹಂಚಿಕೆ ಮಾಡಲಾಗಿರುತ್ತದೆ. ಸಮಯವನ್ನು ಉಳಿತಾಯ ಮಾಡುವ ಸಲುವಾಗಿ ಬಡಾವಣೆಯಲ್ಲಿನ ಪ್ರಾಧಿಕಾರದ ಪಾಲಿನ ಶೇ.50 ರಷ್ಟು ನಿವೇಶನಗಳನ್ನು ಹಂಚಿಕೆ ಮಾಡುವುದರಿಂದ ಬರುವ ಹಣದಿಂದ ವಿವಿಧ ಇಲಾಖೆಗಳಿಗೆ ಪಾವತಿಸಬೇಕಾದ ಕಾಮಗಾರಿಗಳ ಬಾಕಿ ಅನುದಾನವನ್ನು ಸಂದಾಯ ಮಾಡಲು ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. |
| **ಇ)** | ಈ ಯೋಜನೆಗೆ ಸರ್ಕಾರದ ಅನುಮೋದನೆ ಪಡೆದುಕೊಂಡು ಮಾಡಲಾಗಿದೆಯೇ: | ಸರ್ಕಾರದ ಆದೇಶ ಸಂಖ್ಯೆ ನಅಇ 109 ಗುಅಪ್ರಾ 2018, ದಿನಾಂಕ 20.06.2019 ರಲ್ಲಿ ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಸಹಭಾಗಿತ್ವದಲ್ಲಿ ಶೇ.50:50ರ ಅನುಪಾತದಡಿ ಬೀದರ ನಗರದ ಗೋರನಹಳ್ಳಿ (ಬಿ) ಗ್ರಾಮದ ಸರ್ವೆ ನಂ.21/1ರಲ್ಲಿನ 19ಎಕರೆ 26ಗುಂಟೆ ಪೈಕಿ 17ಎಕರೆ 20ಗುಂಟೆ ಪ್ರದೇಶದಲ್ಲಿ 12ಗುಂಟೆ 'ಬಿ' ಖರಾಬು ಹೊರತುಪಡಿಸಿ 17ಎಕರೆ 8ಗುಂಟೆ ಪ್ರದೇಶದಲ್ಲಿ ವಸತಿ ಯೋಜನೆ ಕೈಗೊಳ್ಳಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 18(3) ರಡಿ ಅನುಮೋದನೆ ನೀಡಲಾಗಿದೆ. ಹಾಗೂ ದಿನಾಂಕ 27.05.2021 ರಂದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ ನಅಇ 110 ಗುಅಪ್ರಾ 2018, ದಿನಾಂಕ 20.06.2019 ರಲ್ಲಿ ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಸಹಭಾಗಿತ್ವದಲ್ಲಿ ಶೇ.50:50ರ ಅನುಪಾತದಡಿ ಬೀದರ ನಗರದ |

| | | |
|---|---|---|
| | | ಮತ್ತು ಗೋರನಹಳ್ಳಿ (ಬಿ) ಗ್ರಾಮದ ಸರ್ವೆ ನಂ.22/2 ರಲ್ಲಿನ 15ಎಕರೆ ಪೈಕಿ 05ಗುಂಟೆ 'ಬಿ' ಖರಾಬು ಹೊರತುಪಡಿಸಿ, ಉಳಿಕೆ 14ಎಕರೆ 35ಗುಂಟೆ ಪ್ರದೇಶದಲ್ಲಿ ವಸತಿ ಯೋಜನೆ ಕೈಗೊಳ್ಳಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 18(3) ರಡಿ ಅನುಮೋದನೆ ನೀಡಲಾಗಿದೆ. ಹಾಗೂ ದಿನಾಂಕ 27.05.2021 ರಂದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. |
| **ಈ)** | ಸರ್ಕಾರದ ಅನುಮೋದನೆ ಪಡೆಯದೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೆ ಹಂಚಿಕೆ (ಮಾರಾಟ) ಮಾಡಿದ ಪ್ರಾಧಿಕಾರದ ವಿರುದ್ಧ ಸರ್ಕಾರ ಯಾವ ಕ್ರಮಕೈಗೊಳ್ಳುವುದು? | ಉದ್ಭವಿಸುವುದಿಲ್ಲ. |

ಸಂಖ್ಯೆ : ನಅಇ 327 ಗುಅಪ್ರಾ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು